

# ನೀ ಬಂದು ನಿಂದಿಲ್ಲಿ ದೀಪ ಹಚ್ಚ...

**ಬೆಳಕಿನ ರೂಪಕದ ಮೂಲಕ ವಿವೇಕ ಹಾಗೂ ಮನುಷ್ಯಪ್ರೇಮವನ್ನು ಪಸರಿಸುವ ವಿಶಿಷ್ಟ ಹಬ್ಬ ದೀಪಾವಳಿ. ಈ ಬೆಳಕಿನ ಹಬ್ಬದಲ್ಲಿ ಪಟಾಕಿಯ ಸದ್ದುಗದ್ದಲಕ್ಕೇನು ಕೆಲಸ?**

**■ ರಾಘವೇಂದ್ರ ಈ. ಹೊರಬೈಲು**

ದೀಪಾವಳಿಯ ಜೊತೆಗೆ ನೆನಪಿಗೆ ಬರುವ ಗೀತೆ – ‘ದೀಪದಿಂದ ದೀಪವ ಹಚ್ಚಬೇಕು ಮಾನವ’. ಹೌದಲ್ಲವೇ, ದೀಪ ಬೆಳಗಿಸುವುದೆಂದರೆ ಅದು ವಿವೇಕವನ್ನು, ಮಾನವೀಯತೆಯನ್ನು ಹಂಚುವ ಒಂದು ಅಪೂರ್ವ ಕ್ಷಣ. ಮನೆ ಮನಗಳಲ್ಲಿ ಬೆಳಕಿನ ಚಿತ್ತಾರ ಬಿಡಿಸಿ, ಆಗಸದ ಸೂರ್ಯನೇ ನಾಚುವಂತೆ ಬೆಳಕು ಬೀರುವ ಹಬ್ಬವೇನಾದರೂ ಇರುವುದಾದರೆ ಅದು ದೀಪಾವಳಿ ಮಾತ್ರ. ಪ್ರೀತಿಯಿಂದ ಪ್ರೀತಿಯನ್ನು ಹಂಚುತ್ತಾ ಹೋದಾಗ ಜಗವೆಲ್ಲ ಹೇಗೆ ಪ್ರೀತಿಯಿಂದ ತುಂಬಿಕೊಳ್ಳುವುದೋ ಹಾಗೆಯೇ ದೀಪದಿಂದ ದೀಪ ಹಚ್ಚಿ ಭೂಮಿಯನ್ನೇ ಬೆಳಗಬಹುದಾದ ಬೆಳಕಿನ ಹಬ್ಬ ದೀಪಾವಳಿ.

ಬೆಳಕು ಜ್ಞಾನದ, ಆನಂದದ, ಹರುಷದ ಸಂಕೇತ. ಅಜ್ಞಾನ, ನೋವು, ದುಃಖ, ದುಗುಡಗಳನ್ನು ಕಳೆದು ಸಂತೋಷವನ್ನು ಹರಡಲಿ ಎಂಬ ಭರವಸೆ ಮತ್ತು ನಂಬಿಕೆಯಿಂದ ಬೆಳಕಿನ ಕುಡಿಯಾದ ದೀಪಗಳನ್ನು ಬೆಳಗಿಸಿ, ನೋವ ನೀಗುವ ಪ್ರಯತ್ನವೇ

(8ನೇ ಪುಟ ನೋಡಿ)